ಮೈಸೂರ ಗೆಜಿಟ್.

ಸಂ. XXXVIII.] ಸರ್ಕಾರದಿಂದ ಪ್ರಸಿದ್ಧ ಆಯಿತು. [ಸಂ. 41.

ಬೆಂಗಳೂರು, ಗುರುವಾರ, ಅಕ್ಟೋಬರ್ ತಾ|| 22, ಸ|| 1903.

ವಿಷಯ ಸೂಚಿಕೆ.

1ನೆ ಭಾಗ—ಮೈಸೂರು ಸರ್ಕಾರದಿಂದ ಕೊಡೋಣಾದ ಇಸ್ತಿಹಾರ್ ನಾಮೆಗಳು.

2ನೆ ಭಾಗ—ರೆಸಿಡೆಂಟರು, ಚೀಫ್ ಜಡ್ಜಿಯವರು, ಸರ್ವೇ ವ ಇನಾಂ ಸೂಪರ್ಟೆಂಡೆಂಟರು, ಕಾಂಪ್ಟ್ರೋಲರವರು, ಪಬ್ಲಿಕ್ ವರ್ಕ್ಸ್ ಆಫಿಸರಗಳು, ಫಾರೆಸ್ಟ್ಟು, ರೆಜಿಸ್ಟ್ರೇಷ್ ವ ಯಡ್ಮಿನಿಸ್ಟ್ರೇಷ್ ಇನ್ಸ್ಪೆಕ್ಟರ್ ಜನರಲ್ಲವರು, ಮ್ಯುನಿಸಿಪಲ್ ಬೋರ್ಡು ಪ್ರಸಿಡೆಂಟರು, ಡಿಸ್ಟ್ರಿಕ್ಟ್ ವ ಸೆಷ್ ಜಡ್ಜ್ಗಿರು, ಡಿಸ್ಟ್ರಿಕ್ಟ್ ಡೆಪ್ಯೂಟಿ ಕಮ್ಮಿಷನರುಗಳು, ಸಬಾರ್ಡಿನೇಟ್ ಜಡ್ಜ್ಗಿರು, ಪೊಲೀಸ್ ಸೂಪರ್ಟೆಂಡೆಂಟರು, ಫಾರೆಸ್ಟ್ಟು ಆಫಿಸರ್ಗಳು ಇವರುಗಳಿಂದ ಕೊಡೋಣಾದ ಇಸ್ತಿಹಾರ್ಗಳು ವಗೈರೆ ಕಾಲಸ್ಥತೀ ರಿಪೋರ್ಟುಗಳು; ಪೋಸ್ಟ್ಆಫೀಸ್ ನೋಟೀಸುಗಳು.

3ನೆ ಭಾಗ—ಲೆಜಿಸ್ಲೇಟಿವ್ ರೆಗ್ಯುಲೇಷ್ಗಳು ಮತ್ತು ಅವುಗಳಂತೆ ಆದ ನಿಬಂಧನೆಗಳು—ಇಲ್ಲ.

4ನೆ ಭಾಗ—ಸರ್ಕಾರೀ ಕಾಗದಪತ್ರಗಳು—ಇಲ್ಲ.

☞ ಭಾಗಗಳನ್ನು ಪ್ರತ್ಯೇಕ ಸೇರಿಸಿ ಇಡುವ ಬಗ್ಗೆ ಬೇರೆ ಬೇರೆಯಾಗಿ ಪುಟ ಸಂಖೆ ಕೊಡಲ್ಪಡುತ್ತೆ.

1ನೆ ಭಾಗ.

ಮೈಸೂರ ಸರ್ಕಾರದಿಂದ ಕೊಡೋಣಾದ ಇಸ್ತಿಹಾರ್ನಾಮೆಗಳು.

ಜನರಲ್ ಮತ್ತು ರೆವಿನ್ಯೂ.

ತಾರೀಖು 30ನೆ ಸೆಪ್ಟಂಬರ್ 1903.

ನಂ. ಲೋ. ಬೋ. ಪಿ. 394, ಇದರಿಂದ ಸಮಸ್ತ ಜನಗಳ ತಿಳುವಳಿಕೆ ಬಗ್ಗೆ ಪ್ರಸಿದ್ಧ ಪಡಿಸುವದೇನಂದರೆ—ಸಾಂಕ್ರಾಮಿಕ ರೋಗಗಳ ಕಾನೂನನ್ನು ಅನುಸರಿಸಿ 1898ನೆ ಫಿಬ್ರವರಿ 10ನೆ ಮಾರ್ಕ್ಹಂ 9383—ಮಿ. ಫೈ. 21—96ನೆ ಮತ್ತು 9384—ಮಿ. ಫೈ. 21—96ನೆ ನಂಬರು ಇಸ್ತಿಹಾರ್ನಾಮೆಗಳೊಡನೆ ಕೊಡಲ್ಪಟ್ಟ ಕಾನೂನುಗಳ ಉದ್ದೇಶಗಳಿಗಾಗಿ ಕೋಲಾರ ಡಿಸ್ಟ್ರಿಕ್ಟಿನ ಇದರಡಿ ಕಂಡ ಸ್ಥಳಗಳು "ರೋಗ ತಗಲಿದ ಪ್ರದೇಶಗಳಾಗಿ" ಎಣಿಸಲ್ಪಡತಕ್ಕದ್ದು:—

	ಸ್ಥಳ.	ತಾಲ್ಲೂಕು.		ಸ್ಥಳ.	ತಾಲ್ಲೂಕು.
1.	ದೊಡ್ಡ ಬೂಲಹಳ್ಳಿ	ಬೂರಿಂಗಪೇಟೆ	14.	ಅಬ್ಬಾಯಿನ	ಕೋಲಾರ
2.	ಕೇತಗಾನಹಳ್ಳಿ	ಡಿಟೋ	15.	ಮೈಲಂಡಹಳ್ಳಿ	ಡಿಟೋ
3.	ಚೆಂಬರಸನಹಳ್ಳಿ	ಡಿಟೋ	16.	ಚಾಮರಪಲ್ಲಿ	ಡಿಟೋ
4.	ಚಿಂತಾಮಣಿ ಪಹರು	ಚಿಂತಾಮಣಿ	17.	ದೇವರಾಯಸಂದ್ರ	ಮುಳಬಾಗಲು
5.	ಉಪ್ಪಾರಿಪೇಟೆ	ಡಿಟೋ	18.	ರಾಜೇಂದ್ರಹಳ್ಳಿ	ಡಿಟೋ
6.	ಮಹಮದ್ದುಪುರ	ಡಿಟೋ	19.	ಬೇಪಲ್ಲಿ	ಶ್ರೀನಿವಾಸಪುರ
7.	ಜೋರಪಲ್ಲಿ	ಡಿಟೋ	20.	ನಾಯದೇನಹಳ್ಳಿ	ಡಿಟೋ
8.	ಲಕ್ಕೂರು	ಮಾಲೂರು	21.	ನಾಗಮಂಗಲ	ಕಿಡ್ಲಘಟ್ಟ
9.	ಪುರ	ಡಿಟೋ	22.	ಯಣ್ಣಂಗೂರು	ಡಿಟೋ
10.	ತಿರುಪತಿ	ಡಿಟೋ	23.	ಹಳೇ ಪೆರಿಸಂದ್ರ	ಚಿಕ್ಕಬಳ್ಳಾಪುರ
11.	ತಾಳಕುಂಟೆ	ಡಿಟೋ	24.	ಹೊನ್ನೇನಹಳ್ಳಿ	ಡಿಟೋ
12.	ಕುಡೇರು	ಡಿಟೋ	25.	ಗುಂಡಪ್ಪನಹಳ್ಳಿ	ಡಿಟೋ
13.	ಮುದವಟ್ಟೆ	ಕೋಲಾರ	26.	ಚೆನ್ನೇನಹಳ್ಳಿ	ಡಿಟೋ

ತಾರೀಖು 6ನೆ ಅಕ್ಟೋಬರು 1903.

ನಂ. ಲೋ. ಬೋ. ಪಿ. 405, ಕೊಡಗು ದೇಶದ ಹಜರತ್ ಚೀಫ್ ಕಮಿಷನರ ಸಾಹೇಬರವರಿಂದ ಕೊಡೋಣಾದ ಸ್ಟ 1903ನೆ ಇಸವಿ ಸೆಪ್ಟಂಬರು 19ನೆ ಮಕ್ಕಂ 55ನೆ ನಂಬರು ಇಸ್ತಿಹಾರ್‌ನಾಮೆಯು ಜನಗಳ ತಿಳುವಳಿಕೆ ಬಗ್ಯೆ ಮರಳಿ ಘೋಷಿಸಿ ಮಾಡಿರುತ್ತೆ.

"ಕೊಡಗು ದೇಶದ ಪಾಡಿನಾಲಕ್‌ನಾಡು ತಾಲ್ಲೂಕ್ ತಾವುನಾಡ್ ಸಂಪಾಜಿನಾಡು ಭಾಗಮಂಡಲ ಗ್ರಾಮದಲ್ಲಿ ಬರುವ ತುಲಾ ಸಂಕ್ರಮಣದ ಸಮಯದಲ್ಲಿ ನಡಿಯುವ ತಲಕಾವೇರಿ ಜಾತ್ರೆಗೆ ಮೈಸೂರು ಮತ್ತು ದಕ್ಷಿಣ ಕನ್ನಡ ಜಿಲ್ಲೆ ಮತ್ತು ಪ್ಲೇಗ್ ರೋಗ ತಗಲಿದ ಇತರ ಪ್ರದೇಶಗಳಿಂದಲೂ ಬರುವ ಜನರನ್ನು ಸದರಿ ಸ್ಥಳದಲ್ಲಿ ಸೇರಲು ಬಿಟ್ಟರೆ ಪ್ಲೇಗ್ ರೋಗವು ವ್ಯಾಪಿಸುವ ಅಪಾಯ ಉಂಟೆಂದು ಹಜರತ್ ಚೀಫ್ ಕಮಿಷನರ ಸಾಹೇಬರವರು ತಿಳಿಯುವದ್ದರಿಂದ, ಸ್ಟ 1897ನೆ ಇಸವಿ ಸಾಂಕ್ರಾಮಿಕ ರೋಗಗಳ ಆಕ್ಟ್ ಅನುಸರಿಸಿ ತಮಗೆ ಕೊಟ್ಟಿರುವ ಅಧಿಕಾರಗಳ ಚಲಾವಣೆಯಲ್ಲಿ, ಸ್ಟ 1903ನೆ ಇಸವಿ ಅಕ್ಟೋಬರು ತಾರೀಖು 10ರಿಂದ ನವಂಬರು 15ರ ವರಿಗೆ ಸದರಿ ಜಾತ್ರೆಗೆ ಮೈಸೂರು, ದಕ್ಷಿಣ ಕನ್ನಡ ಜಿಲ್ಲೆ ಮತ್ತು ಪ್ಲೇಗ್ ತಗಲಿದ ಇತರ ಪ್ರದೇಶಗಳಿಂದಲೂ ಜನರು ಬರುವದನ್ನು ಈ ಮೂಲಕ ನಿರೋಧಪಡಿಸಿ ಇಧೆ.

ಈ ಇಸ್ತಿಹಾರ್‌ನಾಮೆಗೆ ವಿರೋಧವಾಗಿ ಸದರಿ ಜಾತ್ರೆಗೆ ಮೇಲೆ ನಮೂದಿಸಿದ ಪ್ರದೇಶಗಳಿಂದ ಜನರು ಬಂದಲ್ಲಿ ಅಂಥಾವರೆಲ್ಲರನ್ನು ಹಿಂದಕ್ಕೆ ಕಳುಹಿಸಲಾಗೀತು."

ತಾರೀಖು 14ನೆ ಅಕ್ಟೋಬರ್ 1903.

ನಂ. ಲೋ. ಬೋ. ಪಿ. 423, ಮದರಾಸು ಗವರ್ನ್‌ಮೆಂಟಿನವರಿಂದ ಕೊಡೋಣಾದ ಇದರಡೀ ಕಂಡ ಇಸ್ತಿಹಾರ್‌ನಾಮೆಯು ಸಮಸ್ತ ಜನಗಳ ತಿಳುವಳಿಕೆ ಬಗ್ಯೆ ಮರಳೀ ಘೋಷಿಪ್ಪಡಲ್ಪಟ್ಟರುತ್ತೆ.

ನೀಲಗಿರಿ ಜಿಲ್ಲಾ ಉಟಕಮಂಡ್‌ನಲ್ಲಿ ಪ್ಲೇಗ್ ರೋಗವು ಇರುವದ್ದರಿಂದಲೂ ಮತ್ತು ಅದು ಹರಡದಂತೆ ಮಾಡುವದು ಯುಕ್ತವೆಂತ ತೋರುವದ್ದರಿಂದಲೂ ರಂಜಾನ್ ತಿಂಗಳ ಅಂತ್ಯ ಭಾಗವೂ ನಂತರ ಬರುವ ಷವ್ವಾಲ್ ತಿಂಗಳ ಮೊದಲುವಾರವೂ ಸೇರಿ ಆಗುವ 1903ನೆ ಇಸವಿ ಡಿಸೆಂಬರು 5ನೆ ತಾರೀಖಿನಿಂದ ಅದೇ ಮಾಹೆಯ 27ನೆ ತಾರೀಖಿನ ವರೆಗೂ ಉಭಯ ದಿನಗಳೂ ಸೇರಿ, ಭಿಕ್ಷಗಾರರು ಮತ್ತು ದೇಶಗೇಡಿಗಳು ಉಟಕಮಂಡ್‌ಗೆ ಪ್ರಯಾಣ ಮಾಡಕೂಡದೆಂತಲೂ ಅದನ್ನು ಪ್ರವೇಶ ಮಾಡಕೂಡದೆಂತಲೂ ಅಲ್ಲಿ ನಿಲ್ಲಕೂಡದೆಂತಲೂ ಮಂತ್ರಾಲೋಚಕ ಸಮಾಜ ಸಹಿತರಾದ ಗವರ್ನರವರು ಸ್ಟ 1897ನೆ ಇಸವಿಯ ಸಾಂಕ್ರಾಮಿಕ ರೋಗಗಳ ಕಾನೂನನುಸರಿಸಿ ತಮಗೆ ಕೊಟ್ಟಿರುವ ಅಧಿಕಾರಗಳ ಚಲಾವಣೆಯಲ್ಲಿ ನಿರೋಧಿಸುತ್ತಾರೆ. ಮತ್ತು ಉಟಕಮಂಡ್‌ಗೆ ಪ್ರಯಾಣ ಮಾಡುವ ಯಾ ಪ್ರಯಾಣ ಮಾಡುವದಾಗಿ ನಂಬಲು ಕಾರಣವುಳ್ಳ ಯಾವ ಭಿಕ್ಷಗಾರ ಅಥವಾ ದೇಶಗೇಡಿಯಾಗಲಿ, ನೀಲಗಿರಿ—ಮಲಬಾರ್ ಮತ್ತು ಕೊಯಿಮತ್ತೂರು ಜಿಲ್ಲಾ ಕಲೆಕ್ಟರುಗಳು ತಮಗೆ ಸೂಕ್ತವಾದಂತೆ ವಿಚ್ಛಾಡು ಮಾಡಿದ ಸ್ಥಳಗಳಲ್ಲಿ ನಿಲ್ಲಬೇಕೆಂತಲೂ ಮತ್ತು ಸದರಿ ಕಲೆಕ್ಟರುಗಳಿಂದ ಇದಕ್ಕಾಗಿ ನೇಮಿಸಲ್ಪಟ್ಟ ಆಫಿಸರುಗಳ ಅಪ್ಪಣೆಯಂತೆ ನಡೆಯತಕ್ಕದ್ದೆಂತಲೂ ತಾತ್ಕಾಲಕ್ಕೆ ವಿಧಾಯಿಸಿರುತ್ತಾರೆ.

ತಾರೀಖು 17ನೆ ಅಕ್ಟೋಬರ್ 1903.

ನಂ. ಲೋ. ಬೋ. ಪಿ. 432, ಇದರಿಂದ ಸಮಸ್ತ ಜನಗಳ ತಿಳುವಳಿಕೆ ಬಗ್ಯೆ ಪ್ರಸಿದ್ಧಪಡಿಸುವದೇನಂದರೆ, ಇದರಡೀ ಕಂಡ ಉತ್ಸವಕ್ಕೆ ಮೈಸೂರ ಸಂಸ್ಥಾನ ಸಹಿತವಾಗಿ ರೋಗ ತಗಲಿದ ಪ್ರದೇಶಗಳಿಂದ ಬರಲು ಉದ್ದೇಶಿಸಿರುವ ಜನಗಳಿಗೆ ಟಿಕೆಟ್ಟುಗಳು ಕೊಡುವದನ್ನು ಮದರಾಸು ಗವರ್ನ್‌ಮೆಂಟಿನವರು ಅಡ್ಡೀಪಡಿಸುತ್ತಾರೆ :—

ಜಾತ್ರೆ ಯಾ ಉತ್ಸವದ ಹೆಸರು.	ಸ್ಥಳ.	ತಾಲ್ಲೂಕು	ಡಿಸ್ಟ್ರಿಕ್ಟು.	ಟಿಕೆಟ್ಟುಗಳು ವಿಕ್ರಯಿಸಲ್ಪಡದೆ ಇರುವ ತಾರೀಖುಗಳು ಮತ್ತು ಸ್ಪೇರ್ಷಗಳು.			ಅಥಾರಿಟಿ.
				ಯಾವ ಲಾಗಾಯತು.	ಯಾವ ವರಿಗೆ.	ಸ್ಪೇರ್ಷಗಳು.	
ಕಾರ್ತಿಕ್ ಉತ್ಸವ ಮತ್ತು ದನಗಳ ಜಾತ್ರೆ	ತಿರುವಣ್ಣಾಮಲೈ	ತಿರುವಣ್ಣಾಮಲೈ	ದಕ್ಷಿಣ ಅರ್ಕಾಟ್	19ನೆ ನವಂಬರ್ 1903	3ನೆ ಡಿಸೆಂಬರ್ 1903	ದಕ್ಷಿಣ ಇಂಡಿಯನ್ ರೈಲ್ವೆಯಲ್ಲಿರುವ ಪೋಲೂರು, ಅಗರಂ ಸಿಬ್ಬಂದಿ, ತಿರುವೆಂಣಾಮಲೈ, ತಾಂಡರೈ, ತಿರುಕ್ಕೋಯಿಲೂರು (ಕೊಯಿಮುತ್ತೂರು, ಸೇಲಂ ಮತ್ತು ಉತ್ತರ ಆರ್ಕಾಡ್ ಡಿಸ್ಟ್ರಿಕ್ಟುಗಳಲ್ಲಿ)	ಪ್ರೆಸ್ಸಿಡೆನ್ಸಿ ರೆಸಿಡೆಂಟರ ಎಡ್ವರ್ಟೈಸ್‌ಮೆಂಟ್ ನಂಬರ್ 1095 ಜಿ., ತಾ|| 15—10—03.

ತಾರೀಖು 17ನೆ ಅಕ್ಟೋಬರ್ 1903.

ನಂ. ಲೋ. ಬೋ. ಪಿ. 431, ಇದರಿಂದ ಸಮಸ್ತ ಜನಗಳ ತಿಳುವಳಿಕೆ ಬಗ್ಗೆ ಪ್ರಸಿದ್ಧಪಡಿಸುವದೇನಂದರೆ, ಇದರಡೀ ಕಂಡ ಜಾತ್ರೆ ವ ಉತ್ಸವಗಳಿಗೆ ರೋಗ ತಗಲಿದ ಪ್ರದೇಶಗಳಿಂದ ಜನಗಳು ಬರುವದನ್ನು ಮದರಾಸು ಗವರ್ನ್‌ಮೆಂಟಿನವರು ಆಜ್ಞೀಪಡಿಸುತ್ತಾರೆ:—

ಜಾತ್ರೆಯ ಹೆಸರು.	ಸ್ಥಳ.	ತಾಲ್ಲೂಕು.	ಡಿಸ್ಟ್ರಿಕ್ಟ್.	ತಾರೀಖು.		ಅಥಾರಿಟಿ.
				ಯಾವ ಲಾಗಾಯ್ತು.	ಯಾವ ವರಿವಿಗೆ.	
ಕಾರ್ತ್ತಿಕೈ ಉತ್ಸವ ಮತ್ತು ದನಗಳ ಪರೆ.	ತಿರುವಣ್ಣಾಮಲೈ	ತಿರುವಣ್ಣಾಮಲೈ	ದಕ್ಷಿಣ ಆರ್ಕಾಡ್.	19ನೆ ನವೆಂಬರ್ 1903.	3ನೆ ಡಿಸೆಂಬರ್ 1903.	ಫಸ್ಟ್ ಅಸಿಸ್ಟೆಂಟ್ ರೆಸಿಡೆಂಟರವರ ಇಂಡಾರ್ಸ್‌ಮೆಂಟ್ ನಂ. 1095—ಪಿ., ತಾ॥ 15-10-03
ಕಾಲಪತ್ತಿ ರಥೋತ್ಸವ.	ಕಾಲಪತ್ತಿ.	ಪಾಲಘಾಟ್.	ಮಲಬಾರ್.	5ನೆ ನವೆಂಬರ್ 1903.	15ನೆ ನವೆಂಬರ್ 1903.	ಡಿಟೋ ನಂಬರ್ 1097—ಪಿ., ತಾ॥ 15—10—03.

ತಾರೀಖು 18ನೆ ಸೆಪ್ಟೆಂಬರ್ 1903.

ನಂ. 658—ಜು., ಮೈಸೂರು ಸೀಮೆಯ ರೆಸಿಡೆಂಟರವರ ಫಸ್ಟ್ ಅಸಿಸ್ಟೆಂಟರವರಿಂದ ಕೊಡಲ್ಪಟ್ಟ 1903ನೆ ಸೆಪ್ಟೆಂಬರ್ 10ನೆ ಮಾರ್ಕಿನ ಇದರಡೀ ಕಂಡ ನೋಟಿನು ಸಮಸ್ತ ಜನಗಳ ತಿಳುವಳಿಕೆ ಬಗ್ಗೆ ಪುನಹ ಘಾಯಿಷ್ಮಾಡಲ್ಪಟ್ಟಿರುತ್ತದೆ: —

"ಸ॥1878ನೆ ಇಸವಿಯ ಇಂಡಿಯ ಆರ್ಮ್ಸ್ ಆಕ್ಟ್‌ನುಸರಿಸಿ ಕೊಡಲ್ಪಟ್ಟ ರೂಲುಗಳಿಗನುಸಾರವಾಗಿ ಬ್ರಿಟಿಷ್ ಇಂಡಿಯಾ ದೇಶದಿಂದ ಬೆಂಗಳೂರ ಸಿವಿಲ್ ವ ಮಿಲಿಟೆರಿ ಸ್ಟೇಷನ್ ಸಹಿತವಾಗಿ ಮೈಸೂರ ಸಂಸ್ಥಾನಕ್ಕೆ ಆಯುಧಗಳನ್ನೂ ಮತ್ತು ಮದ್ದು ವಗೈರೆಗಳನ್ನೂ ಆಮದು ಮಾಡಲಿಕ್ಕೆ ಲೈಸೆನ್ಸುಗಳಿಗೋಸ್ಕರ ಅರ್ಜಿಗಳು ಮತ್ತು ಈ ರೂಲುಗಳಿಗೆ ಸಂಬಂಧಪಟ್ಟ ದರೋಬಸ್ತು ಕಾಗದ ಪತ್ರಗಳು ಬೆಂಗಳೂರಲ್ಲಿರುವ ಮೈಸೂರು ಸೀಮೆಯ ಫಸ್ಟ್ ಅಸಿಸ್ಟೆಂಟ್ ರೆಸಿಡೆಂಟರವರಿಗೆ ಬರೆದುಕೊಳ್ಳಬೇಕೇ ಹೊರ್ತು, ಮೈಸೂರು ಸೀಮೆಯ ರೆಸಿಡೆಂಟರವರಿಗೆ ಬರೆದುಕೊಳ್ಳಕೂಡದು."

ತಾರೀಖು 17ನೆ ಅಕ್ಟೋಬರ್ 1903.

ನಂ. 768—ಜು. 101—1902-03, ಮೈಸೂರ ಚೀಫ್ ಕೋರ್ಟಿನ ಡೆಪ್ಯುಟಿ ರಿಜಿಸ್ಟ್ರಾರ್‌ರಾದ ಮೆ॥ ಜೆ. ಕ್ಲಾಫಾಂ ಯವರಿಗೆ 1903ನೆ ಅಕ್ಟೋಬರ್ 3ನೆ ಮಾರ್ಕ್ಕಂ 719—ಜು. ಫೈ. 101-03ನೆ ನಂಬರ್ ಇಸ್ತಿಹಾರ್ನಾವೆಯಲ್ಲಿ ಕೊಟ್ಟಿದ್ದ 27 ದಿನಗಳ ಪ್ರಿವಿಲೇಜ್ ರಜಾ ಇನ್ನೂ 15 ದಿನಗಳು ಇದರಿಂದ ಜಾಸ್ತಿ ಮಾಡಲ್ಪಟ್ಟಿರುತ್ತದೆ.

ತಾರೀಖು 17ನೆ ಅಕ್ಟೋಬರ್ 1903.

ನಂ. 1458—ಲೋ. ಫಂ. 92-96, ಸ॥ 1891ನೆ ಫೆಬ್ರವರಿ 23ನೆ ಮಾರ್ಕ್ಕಂ 425ನೆ ನಂಬರ್ ಮತ್ತು 1903ನೆ ಆಗಸ್ಟು 14ನೆ ಮಾರ್ಕ್ಕಂ 2394—ಲೋ. ಫಂ. 64-92ನೆ ನಂಬರ್ ಗವರ್ನ್‌ಮೆಂಟ್ ಇಸ್ತಿಹಾರ್ನಾವೆಗಳನ್ನು ಬದಲಾಯಿಸೋಣದ ರಲ್ಲಿ, 1903ನೆ ಫೆಬ್ರವರಿ 16ನೆ ಮಾರ್ಕ್ಕಂ 11888—9—ಲೋ. ಫಂ. 92-96ನೆ ನಂಬರ್ ಗವರ್ನ್‌ಮೆಂಟಿನ ಪ್ರೊಸಿಡಿಂಗ್ಸ್ ಅನುಸರಿಸಿ ಬೆಂಗಳೂರ ಷಹರಿನ ನರಹದ್ದುಗಳಲ್ಲಿ ತರಲ್ಪಟ್ಟ ಬಸವನಗುಡಿ ವ ಮಲ್ಲೇಶ್ವರಂ ಬಡಾವಣೆಗಳು ಸೇರಿ ಬೆಂಗಳೂರ ಷಹರು ಇದರಡೀ ಕಂಡಂತೆ 9 ಡಿವೀರ್ಜಗಳಾಗಿ ವಿಂಗಡಿಸಲ್ಪಡತಕ್ಕದ್ದೆಂದು ಮೈಸೂರು ಸೀಮೆಯ ಘನವನ್ನೈದಿದ ಶ್ರೀಮಂ ಮಹಾರಾಜಾ ಸರ್ಕಾರದವರು ಅಪ್ಪಣೆ ಕೊಡುತ್ತಾರೆ:—

I.	ಪ್ಯಾಲೇಸ್	ಡಿವೀರ್ಜ	VI.	ಲಾಲ್‌ಬಾಗ್	ಡಿವೀರ್ಜ
II.	ಬಳೇಪೇಟೆ	ಡಿಟೋ	VII.	ಫೋರ್ಟ್	ಡಿಟೋ
III.	ಮಾನವರ್ತೆಪೇಟೆ	ಡಿಟೋ	VIII.	ಬಸವನಗುಡಿ	ಡಿಟೋ
IV.	ಅಲಸೂರಪೇಟೆ	ಡಿಟೋ	IX.	ಮಲ್ಲೇಶ್ವರಂ	ಡಿಟೋ
V.	ನಗರತಪೇಟೆ	ಡಿಟೋ			

ತಾರೀಖು 16ನೆ ಅಕ್ಟೋಬರ್ 1903.

ನಂ. ಫೈ.—1002—ರೆ. ಫೈ. 44-1902, ಮೈಸೂರ ಸರ್ವಿಸ್ ರೆಗ್ಯುಲೇಷ್ಯಗಳ 188ನೆ ಆರ್ಟಿಕಲ್ ಅನುಸರಿಸಿ ಅಕೌಂಟ್ ಪ್ರೊಬೇಷನರಾದ ಮೆ॥ ಎಲ್. ಭಿಷ್ಟೋಪಂತ್ ಬಾದಾಮಿಯವರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಾರಭ್ಯ $1\frac{1}{2}$ ತಿಂಗಳುಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿರುತ್ತದೆ.

ತಾರೀಖು 15ನೆ ಅಕ್ಟೋಬರ್ 1903.

ನಂ. ರೆ. 1064, ಸ್ 1894ನೆ ಇಸವಿಯ VIIನೆ ನಂಬರ್ ಲ್ಯಾಂಡ್ ಅಕ್ವಿಜೀಷನ್ ರೆಗ್ಯುಲೇಷನಿನ 6ನೆ ಸೆಕ್ಷನ್ ಅನುಸರಿಸಿ ಇದರಿಂದ ಪ್ರಸಿದ್ಧಪಡಿಸುವದೇನಂದರೆ, ಇದರಡೀ ಕಂಡ ಜಮೀನು ಸರ್ಕಾರ ಕೆಲಸಕ್ಕೆ ಅಂದರೆ, ಚನ್ನಗಿರಿ ತಾಲ್ಲೂಕಿನ ಹೊಸಹಳ್ಳಿ ಗ್ರಾಮಕ್ಕೆ ಹೊಸಗ್ರಾಮ ನಿವೇಶನವನ್ನು ಏರ್ಪಡಿಸತಕ್ಕ ಬಗ್ಗೆ ಬೇಕಾಗಿರುತ್ತದೆ. ಮತ್ತು ಆದೇ ರೆಗ್ಯುಲೇಷನಿನ 7ನೆ ಸೆಕ್ಷನ್ ಅನುಸರಿಸಿ ಶಿವಮೊಗ್ಗ ಡಿಸ್ಟ್ರಿಕ್ಟಿನ ಫಸ್ಟ್ ಅಸಿಸ್ಟೆಂಟ್ ಕಮಿಷನರವರು ಸದರೀ ಜಮೀನನ್ನು ಹೊಂದುವ ಬಗ್ಗೆ ಹುಕುಂ ಪಡೆಯಲು ಅಧಿಕಾರ ಕೊಡಲ್ಪಟ್ಟಿರುತ್ತಾರೆ :—

ಡಿಸ್ಟ್ರಿಕ್ಟು.	ತಾಲ್ಲೂಕು.	ಹೋಬಳಿ.	ಗ್ರಾಮ.	ಹಿಡುವಳೀದಾರನ ಹೆಸರು.	ನಂ. ಸರ್ವೆ	ಜುಮ್ಲಾ ವಿಸ್ತೀರ್ಣ.	ಆಕಾರ.	ಚಕ್ಕುಬಂದಿ.			
								ಪೂರ್ವ.	ಪಶ್ಚಿಮ.	ಉತ್ತರ.	ದಕ್ಷಿಣ.
						ಎಕರೆ. ಗುಂಟೆ.	ರೂ. ಆ. ಪೈ.				
ಶಿವಮೊಗ್ಗ	ಚನ್ನಗಿರಿ	ನಲ್ಲೂರು	ಹೊಸಹಳ್ಳಿ	ಪೊಡ್ಡರ್ ದಾಸಾ ಬೋಯಿ	139 ಖುಷ್ಕಿ	10 21	6 8 0	ಸರ್ವೆ ನಂ. 152	ಸರ್ವೆ ನಂ. 137	ಸರ್ವೆ ನಂ. 138	ಸರ್ವೆ ನಂ. 140 ಮತ್ತು 141

ತಾರೀಖು 16ನೆ ಅಕ್ಟೋಬರ್ 1903.

ನಂ. ರೆ. 1074—ರೆ. ಫೈ. 109–1896, ಮೈಸೂರ ಸರ್ವಿಸ್ ರೆಗ್ಯುಲೇಷನ್‌ಗಳ 188ನೆ ಆರ್ಟಿಕಲ್ ಅನುಸರಿಸಿ ಶಿವಮೊಗ್ಗ ಡಿಸ್ಟ್ರಿಕ್ಟಿನ ಅಸಿಸ್ಟೆಂಟ್ ಕಮಿಷನರಾದ ಮೆ॥ ಟಿ. ಚೊಕ್ಕಣ್ಣನವರಿಗೆ 1903ನೆ ಆಗಸ್ಟ್ 3ನೆ ತಾರೀಖಿನಾರಭ್ಯ 5 ದಿನಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿತ್ತು.

ತಾರೀಖು 17ನೆ ಅಕ್ಟೋಬರ್ 1903.

ನಂ. 317—ಎಕ್ಸೈ. ಫೈ. 22–96, ಮೈಸೂರು ಸರ್ವಿಸ್ ರೆಗ್ಯುಲೇಷನ್‌ಗಳ 188ನೆ ಆರ್ಟಿಕಲ್ ಅನುಸರಿಸಿ ತುಮಕೂರು ಡಿವೀಜ್ ಎಕ್ಸೈಜ್ ಇಲಾಖೆಯ ಎಕ್ಸಟ್ರಾ ಅಸಿಸ್ಟೆಂಟ್ ಕಮಿಷನರಾದ ಮೆ॥ ಟಿ. ಎಸ್. ವಿಾರನಿಜಾಮುದ್ದೀಅಲಿಖಾ ಯವರಿಗೆ 1903ನೆ ಸೆಪ್ಟಂಬರ್ 29ನೆ ಮಕ್ಕುಂ 292—ಎಕ್ಸೈ. ಫೈ. 22–96ನೆ ನಂಬರ್ ಗವರ್ನಮೆಂಟಿನ ಇಸ್ತಿಹಾರ್ನಾಮೆಯಲ್ಲಿ ಕೊಟ್ಟಿದ್ದ ರಜಾದೊಂದಿಗೆ ಇನ್ನೂ 5 ದಿನಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿರುತ್ತದೆ.

ಹುಕುಂ ಬಮೋಜೀಬ್,
ಹೆಚ್. ವಿ. ನಂಜುಂಡೈಯ್ಯ,
ಜನರಲ್ ಮ ರವಿನ್ಯೂ ಇಲಾಖೆಗಳ ಗವರ್ನಮೆಂಟ್ ಸೆಕ್ರಿಟೆರಿ.